**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 804/2020

ಸಿ.ಡಬ್ಲೂ: 11 ಪಿ.ಡಬ್ಲೂ: 10

ಹೆಸರುಃ ವಿಜಯ
ತಂದೆಯ ಹೆಸರುಃ ವಿರುಪಾಕ್ಷಪ್ಪ ಶಿರೋಳ
ವಯಸ್ಸುಃ 26 ವರ್ಷ
ಉದ್ಯೋಗಃ ಖಾಸಗಿ ಕೆಲಸ
ವಿಳಾಸಃ ಬೆಂಗಳೂರು

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ **23/01/2025** ರಂದು **ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ಚಾಸಾ-5 ನನ್ನ ತಂದೆ. ನಾನು ಮೊದಲು ಚಾಸಾ-1 ಇವರ ಹತ್ತಿರ ಕೆಲಸದಲ್ಲಿ ಇದ್ದೆ. ಚಾಸಾ-8 ವಿನಾಯಕ ನನಗೆ ಪರಿಚಯ. ನನ್ನ ತಂದೆ, ನಾನು ಹಾಗೂ ಚಾಸಾ-1 ಹಾಗೂ ಚಾಸಾ-8 ಹಾಗೂ ಚಾಸಾ-6 , 7 ಎಲ್ಲರೂ ಸೇರಿ ಚಾಸಾ-4 ಶೇಖರಗೌಡ ಇವರ ಮನೆಯಲ್ಲಿ ಚಾಸಾ-1 ಇವರ ಮನೆಯ ಆಸ್ತಿಯ ವಿಚಾರವಾಗಿ ಪಾಲುವಾಟ್ನಿ ಮಾತುಕತೆ ಮಾತನಾಡುತ್ತಿದ್ದಾಗ, ಅಲ್ಲಿಗೆ ಆರೋಪಿತರು ಬಂದರು.

2. ಆರೋಪಿ ಪ್ರಶಾಂತ ನನಗೆ ಪರಿಚಯ. 2 ನೇ ಆರೋಪಿ 1 ನೇ ಆರೋಪಿಯ ತಾಯಿ. ಚಾಸಾ-1 ಮತ್ತು ಆರೋಪಿತರ ನಡುವೆ ಆಸ್ತಿ ಸಲುವಾಗಿ ಜಗಳವಾಗಿತ್ತು. ದಿನಾಂಕ 16/05/ 2020 ಕರೋನಾ ಟೈಮ್ ನಲ್ಲಿ ಈ ಗಲಾಟೆಯಾಗಿತ್ತು, ಅಲ್ಲಿ ಚಾಸಾ-8 ಇವರ ಎಡಗೈ ಮುಂಗೈ ಭಾಗದಲ್ಲಿ ಆರೋಪಿಯು ಉಳಿಯಿಂದ ಹೊಡೆದು, ಆತನ ಮುಂಗೈ ಕಟ್ಟಾಗಿ, ರಕ್ತ ಬರುತ್ತಿತ್ತು. ನಾನು ಗಲಾಟೆಯನ್ನು ನೋಡಲಿಲ್ಲ. ಆ ಸಮಯದಲ್ಲಿ ನಾನು ಚಾಸಾ-1 ಇವರ ಟ್ರ್ಯಾಕ್ಟರ್ ಗೆ ಡಿಸೇಲ್ ಹಾಕಿಸಲು ಹೋದೆ. ವಾಪಸ್ ಬಂದು ನೋಡಿದಾಗ ಚಾಸಾ-8 ಈತನ ಕೈಗೆ ರಕ್ತ ಹರಿಯುತಿತ್ತು. ಆಗ ನಾನು ಮತ್ತು ಚಾಸಾ-1, ಚಾಸಾ-1 ಇವರ Ecosports ಕಾರಿನಲ್ಲಿ ರೋಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆ. ಅಲ್ಲಿಂದ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಅಲ್ಲಿ ವೈದ್ಯರು ಹೇಳಿದರು. ನಂತರ ಆಂಬ್ಯುಲೇನ್ಸನಲ್ಲಿ ರೋಣದಿಂದ ಗದಗ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಷ್ಟರಲ್ಲಿ ವಿನಾಯಕನ ಹೆಂಡತಿ ಗಾಯತ್ರಿ ಬೈಕ್ ನಲ್ಲಿ ರೋಣದ ಸರ್ಕಾರಿ ಆಸ್ಪತ್ರೆಗೆ ಬಂದರು. ನಂತರ

-2-

ನಾನು ಮನೆಗೆ ಬಂದು ವಿನಾಯಕನ ಬಟ್ಟೆ ತೆಗೆದುಕೊಂಡು ಹೋಗಲು ಮನೆಗೆ ಬಂದು ಗಾಯತ್ರಿ ಇವರನ್ನು ಕರೆದುಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋದೆ. ನಂತರ ಅಲ್ಲಿಂದ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಗೊತ್ತಾಯಿತು. ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಸಂಜೆ ತನಕ ಇದ್ದೆ. ಗದಗನಲ್ಲಿ ಚಿಕಿತ್ಸೆ ಕೊಟ್ಟರು.

**ಪಾಟೀ ಸವಾಲು ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**

**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ. 804/2020

ಸಿ.ಡಬ್ಲೂ: 10 ಪಿ.ಡಬ್ಲೂ: 9

ಹೆಸರು: ಸಂತೋಷ
ತಂದೆಯ ಹೆಸರು: ಈರನಗೌಡ ಜಕ್ಕನಗೌಡ್ರ
ವಯಸ್ಸು: 26 ವರ್ಷ
ಉದ್ಯೋಗ: ಖಾಸಗಿ ಕೆಲಸ
ವಿಳಾಸ: ರೋಣ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ: 23/01/2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ: -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ:</u>**

**1.** ಚಾಸಾ-1 ನನ್ನ ಕಾಕ. ಚಾಸಾ-8 ವಿನಾಯಕ ಮತ್ತು ಆರೋಪಿ ಪ್ರಶಾಂತ ನನ್ನ ದೊಡ್ಡಪ್ಪನ ಮಕ್ಕಳು. 2 ನೇ ಆರೋಪಿ 1 ನೇ ಆರೋಪಿಯ ತಾಯಿ. ಚಾಸಾ-1 ಮತ್ತು ಆರೋಪಿತರ ನಡುವೆ ಆಸ್ತಿ ಸಲುವಾಗಿ ಜಗಳವಾಗಿತ್ತು. 16/05/ 2020 ಕರೋನಾ ಟೈಮ್ ನಲ್ಲಿ ಈ ಗಲಾಟೆಯಾಗಿತ್ತು. ನನ್ನ ಅಣ್ಣ ಚಾಸಾ-8 ವಿನಾಯಕ ರೋಣದ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದಾನೆ ಎಂದು ನನ್ನ ಕಾಕ ಚಾಸಾ-1 ಶಿವನಗೌಡ ಫೋನ್ ಮಾಡಿ ಹೇಳಿದರು. ನಾನು ಆಸ್ಪತ್ರೆಗೆ ಹೋದೆ. ಅವರ ಎಡಗೈ ಮುಂಗೈ ಭಾಗದಲ್ಲಿ ಕಟ್ಟಾಗಿತ್ತು, ರಕ್ತ ಬರುತ್ತಿತ್ತು. ನಾನು ಗಲಾಟೆಯನ್ನು ನೋಡಲಿಲ್ಲ, ಸಿದಾ ಆಸ್ಪತ್ರೆಗೆ ಬಂದೆ. ನಂತರ ರೋಣದಿಂದ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆ. ನಂತರ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ 2 ದಿನ ಆಸ್ಪತ್ರೆಯಲ್ಲಿ ಇದ್ದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**-2-**

**ಪಾಟೀ ಸವಾಲು:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

1. ದಿನಾಂಕ 16/05/2020 ಸಂಜೆ ನಾನು ಮತ್ತು ನಮ್ಮ ಕಾಕ ಹಾಗೂ ವಿರುಪಾಕ್ಷಪ್ಪ, ಖಾಧೀರಸಾಬ ಮುಲ್ಲಾ ಎಲ್ಲರೂ ಆಸ್ತಿ ಪಾಲುವಾಟ್ನಿ ಸಲುವಾಗಿ ಮಾತನಾಡುತ್ತಾ ಕುಳಿತಿದ್ದಾಗ, ಆರೋಪಿತರು ಇಬ್ಬರು ಬಂದವರೇ ಸರಿಯಾಗಿ ಪಾಲು ಮಾಡಿಕೊಟ್ಟಿಲ್ಲಾ ಎಂದು ಹೇಳಿ ಪ್ರಶಾಂತ ಚಾಸಾ-1 ಇವರಿಗೆ ಬೈದಾಡುತ್ತಾ ತನ್ನ ಕೈಯಲ್ಲಿ ಇದ್ದ ಉಳಿಯ ತುಂಬಿನಿಂದ ಬಲಗಡೆ ಬುಜಕ್ಕೆ ಹೊಡೆದು, ಆಗ ಬಿಡಿಸಲು ಬಂದ ವಿನಾಯಕನಿಗೆ ಉಳಿಯಿಂದ ಎಡಗೈ ಮುಂಗೈಗೆ ಹೊಡೆದು, ಗಾಯ ಪಡಿಸಿದ ಎಂದರೆ ಸಾಕ್ಷಿ ನಾನು ಅಲ್ಲಿ ಇರಲಿಲ್ಲಾ ಎಂದು ಹೇಳುತ್ತಾರೆ. ಲಕ್ಷ್ಮವ್ವ ಇವರು ಕಟ್ಟಿಗೆ ಬಡಿಗೆಯಿಂದ ವಿನಾಯಕನ ಬೆನ್ನಿಗೆ ಹೊಡೆದಳು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಸ.ಸ.ಅ. ರವರು ಆತನ ಹೇಳಿಕೆಯ ಭಾಗವನ್ನು ಓದಿ ಹೇಳಿರುತ್ತಾರೆ. ಸಾಕ್ಷಿ ಅದನ್ನು ತಿಳಿದುಕೊಂಡು ಅದನ್ನು ತಾನು ಪೋಲಿಸರ ಮುಂದೆ ನೀಡಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ "16/05/2020 ರಂದು ……. ಆಸ್ಪತ್ರೆಗೆ ಕರೆದುಕೊಂಡು ಹೋಗಿ " ಇದನ್ನು ನಿಪಿ: 6 ಎಂದು ಗುರುತಿಸಲಾಯಿತು.

2. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**